9981 ಪ್ರಾಥಮಿಕ ಶಾಲಾ ಶಿಕ್ಷಕರು ಮತ್ತು 4845 ಪ್ರೌಢಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇವೆ.

-ಇಲ್ಲ-

ಉದ್ಭವಿಸುವುದಿಲ್ಲ

ಖಾಲಿ ಹುದ್ದೆಗಳನ್ನು ತುಂಬಲು ಶೀಘ್ರ ಕ್ರಮ ಕೈಗೊಳ್ಳಲಾಗುವುದು.

ವಿಷಯ:- ಸರ್ಕಾರಿ ಪಾಲಿಟೆಕ್ನಿಕ್ ಬೆಳಗಾವಿಯಲ್ಲಿ. ಟೆಲಿಕಮ್ಯುನಿಕೇಷನ್ ಡಿಪ್ಲೊಮೊ ಕೋರ್ಸ್

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 250(306)

ಶ್ರೀ ಕೆ.ಸಿ.ಮೊಡಗೇಕರ ದೇಸಾಯಿ(ಹಿರೇಬಾಗೇವಾಡಿ)

ಮಾನ್ಯ ಉನ್ನತ ಶಿಕ್ಷಣ ಹಾಗೂ ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರಿ ಪಾಲಿಟೆಕ್ನಿಕ್ ಬೆಳಗಾವಿಯಲ್ಲಿ ಟೆಲಿಕಮ್ಯುನಿಕೇಷನ್ ಡಿಪ್ಲೊಮೊ ಕೋರ್ಸನ್ನು ಪ್ರಾರಂಭಿಸಲು ಸರ್ಕಾರವು 1993-94ನೇ ಸಾಲಿನ ಆಯವ್ಯಯದಲ್ಲಿ ಹಣ ಒದಗಿಸಿದೆಯೇ?

ಆ) ಹಾಗಿದ್ದಲ್ಲಿ ಸದರಿ ಕೋರ್ಸ್‌ನ್ನು ಪ್ರಾರಂಭಿಸಲು ಅಗತ್ಯ ಕ್ರಮಗಳನ್ನು ಏಕೆ ತೆಗೆದುಕೊಂಡಿಲ್ಲ?

ಇ) ಸರ್ಕಾರಿ ಪಾಲಿಟೆಕ್ನಿಕ್ ಬೆಳಗಾವಿ ಈ ಸಂಸ್ಥೆಯು ಅತೀ ಹಳೆಯ ಸಂಸ್ಥೆಯಾಗಿದ್ದು ಉತ್ತಮ ಕಟ್ಟಡ ಹಾಗೂ ಇತರ ಮೂಲಭೂತ ಸೌಲಭ್ಯ ಇರುವ ಕುರಿತು ಸರ್ಕಾರಕ್ಕೆ ತಿಳಿದಿದೆಯೇ?

ಈ) ಸದರಿ ಕೋರ್ಸನ್ನು ಪ್ರಾರಂಭಿಸಲು ಸರ್ಕಾರವು ಕ್ರಮ ಜರುಗಿಸುವುದೇ?

ಶ್ರೀ ಎಸ್.ಎಂ.ಯಾಹ್ಯಾ

(ಉನ್ನತ ಶಿಕ್ಷಣ ಸಚಿವರು)

ಇಲ್ಲ

ಉದ್ಭವಿಸುವುದಿಲ್ಲ

ಹೌದು

ಪರಿಶೀಲಿಸಲಾಗುವುದು.

ವಿಷಯ:- ಬೆಳಗಾಂ ಜಿಲ್ಲೆಯಲ್ಲಿ ಕಪ್ಪುಹಲಗೆ ಯೋಜನೆ ಕುರಿತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 251(439)

ಶ್ರೀ ಕೆ.ಸಿ. ಮೊಡಗೇಕರ ದೇಸಾಯಿ(ಹಿರೇಬಾಗೇವಾಡಿ)

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಪ್ಪುಹಲಗೆ ಯೋಜನೆಯ ಅಡಿ ಬೆಳಗಾಂ ಜಿಲ್ಲೆಯಲ್ಲಿ ಇದುವರೆಗೆ ನಿರ್ಮಾಣಗೊಂಡ ಶಾಲಾ ಕೊಠಡಿಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಆ) ಬೆಳಗಾಂ ಜಿಲ್ಲೆಯಲ್ಲಿ ಈವರೆಗೆ ನೇಮಕವಾಗಿರುವ ಶಿಕ್ಷಕರ ಸಂಖ್ಯೆ ಎಷ್ಟು? (ಭಾಷಾವಾರು ಮಾಹಿತಿ ಒದಗಿಸುವುದು)

ಇ) ಬೆಳಗಾಂ ಜಿಲ್ಲೆಯಲ್ಲಿ ಖಾಲಿ ಇರುವ ಸಹಾಯಕ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು? (ಭಾಷಾವಾರು ಮಾಹಿತಿ ಒದಗಿಸುವುದು)

ಈ) ಸಹಾಯಕ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿಮಾಡಲು ಸರ್ಕಾರ ಕೈಗೊಂಡಿರುವ

ಕ್ರಮಗಳೇನು?

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ

(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಕಪ್ಪುಹಲಗೆ ಯೋಜನೆಯಡಿ ಬೆಳಗಾಂ ಜಿಲ್ಲೆಗೆ ಮಂಜೂರಾಗಿರುವ ಶಾಲಾ ಕೊಠಡಿಗಳ ಸಂಖ್ಯೆ 958

ಇದರಲ್ಲಿ ಈವರೆಗೆ 684 ಶಾಲಾ ಕೊಠಡಿಗಳ ನಿರ್ಮಾಣ ಪೂರ್ತಿಗೊಂಡಿದೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ:

ತಾಲ್ಲೂಕು	ಮಂಜೂರಾದ ಶಾಲಾಕೊಠಡಿಗಳ ಸಂಖ್ಯೆ	ನಿರ್ಮಾಣ ಪೂರ್ಣಗೊಂಡಿರುವ ಶಾಲಾ ಕೊಠಡಿಗಳ ಸಂಖ್ಯೆ
1) ಗೋಕಾಕ್	109	99
2) ರಾಯಭಾಗ್	120	93
3) ಅಥಣಿ	88	80
4) ಸೌಂದತ್ತಿ	56	40
5) ರಾಮದುರ್ಗ	69	43
6) ಹುಕ್ಕೇರಿ	68	38
7) ಬೈಲಹೊಂಗಲ	39	29
8) ಖಾನಾಪುರ	176	132
9) ಚಿಕ್ಕೋಡಿ:ನಿಪ್ಪಾಣಿ	37	23
10) ಚಿಕ್ಕೋಡಿ(ದ)	59	49
11) ಬೆಳಗಾಂ ನಗರ	21	7
12) ಬೆಳಗಾಂ(ಗ್ರಾಂ)	116	51
ಒಟ್ಟು:	**958**	**684**

ಬೆಳಗಾಂ ಜಿಲ್ಲೆಯಲ್ಲಿ 1-3-90 ರಿಂದ 31-5-91ರವರೆಗಿನ ಅವಧಿಯಲ್ಲಿ ಒಟ್ಟು 802 ಪ್ರಾಥಮಿಕ ಶಾಲಾ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿಮಾಡಲಾಗಿದೆ.(ಭಾಷಾವಾರು ವಿವರ ಲಗತ್ತಿಸಿದೆ)

ಬೆಳಗಾಂ ಜಿಲ್ಲೆಯಲ್ಲಿ 1-6-91 ರಿಂದ 30-6-92ರವರೆಗೆ ಒಟ್ಟು 277 ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇದೆ(ಭಾಷಾವಾರು ವಿವರ ಲಗತ್ತಿಸಿದೆ)

ಪ್ರಾಥಮಿಕ ಶಿಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವ ಸಂಬಂಧ ಈಗಿರುವ ನಿಯಮಾವಳಿಗಳಿಗೆ ಕೆಲವೊಂದು ತಿದ್ದುಪಡಿ ಮಾಡಲಾಗುತ್ತಿದೆ. ಸಧ್ಯದಲ್ಲಿಯೇ ಈ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಅನುಬಂಧ-1-

ಬೆಳಗಾಮ್ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಿದ ಬಗ್ಗೆ ವಿವರ

ವಿವರ	ಕನ್ನಡ	ಉರ್ದು	ಹಿಂದಿ ದೈ. ಶಿಕ್ಷಕರು		ಮರಾಠಿ ಶಿಕ್ಷಕರು	ಸಂಗೀತ ಶಿಕ್ಷಕರು	ಒಟ್ಟು
ದಿನಾಂಕ: 1.3.90 ರಿಂದ 31.5.91ರ ವರೆಗಿನ ಯೋಜನೇತರ ಹುದ್ದೆಗಳು	316	25	12	62	93	01	509
ಕಪ್ಪು ಹಲಗೆಯ ಕಾರ್ಯ-ಕ್ರಮದ 3ನೇ ಹಂತದ ಹುದ್ದೆಗಳು	073	-	-	-	-	-	073
ಕಪ್ಪು ಹಲಗೆಯ ಕಾರ್ಯ-ಕ್ರಮದ 4ನೇ ಹಂತದ ಹುದ್ದೆಗಳು	135	18	-	-	67	-	220
ಒಟ್ಟು	**524**	**43**	**12**	**62**	**160**	**01**	**802**

ಅನುಬಂಧ-2

ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಸಂಬಂಧಿಸಿದಂತೆ ದಿನಾಂಕ : 1.6.91 ರಿಂದ 30.6.92ರ ವರೆಗೆ ಬೆಳಗಾಮ್ ಜಿಲ್ಲೆಯಲ್ಲಿರುವ ಖಾಲಿ ಹುದ್ದೆಗಳ ವಿವರ

ಕನ್ನಡ	ಉರ್ದು	ಮರಾಠಿ	ದೈಹಿಕ ಶಿಕ್ಷಕರು	ಪೂರ್ವ ಪ್ರಾಥಮಿಕ ಕನ್ನಡ	ಒಟ್ಟು
176	24	62	08	07	277